739 ಶ್ರೀ ಖಾಜಿ ಅರಶದ ಅಲಿ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಎಂಟು ಅಧೀಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು, ಸರ್ಕಾರದ ಪರಿಶೀಲನೆಯಲ್ಲಿದೆ.

Yes, Under consideration of the Government.

ಪ್ರವಾಸೋದ್ಯಮ ಪಟ್ಟಿಯಲ್ಲಿ ಹೆಸರು ಪಡೆದಿರುವುದು

775 ಶ್ರೀ ಬಂಡೆಪ್ಪ ಕಾಶ್ಯಂಪೂರ್ : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಕೇಂದ್ರ ಪ್ರವಾಸೋದ್ಯಮ ಪಟ್ಟಿಯಲ್ಲಿ ಹೆಸರು ಪಡೆದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ಪಟ್ಟಿಗೆ ಪ್ರವಾಸೋದ್ಯಮ ಸೇರಿಸಲಾಗಿದೆ;

ಇ) ಪ್ರವಾಸಿ ಸ್ಥಳಗಳನ್ನಾಗಿ ಯಾವ ಯಾವ ಪ್ರದೇಶಗಳನ್ನು ಗುರುತಿಸಲಾಗಿದೆ;

ಈ) ಪ್ರವಾಸಿ ಸ್ಥಳಗಳನ್ನಾಗಿ ಗುರುತಿಸಿರುವ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ;

ಉ) ಹಾಗಿದ್ದಲ್ಲಿ, ಯಾವ ಯಾವ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ;

ಊ) ಬೀದರ್ ಜಿಲ್ಲೆಯ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಋ) ನಿಗದಿಪಡಿಸಿದ ಅನುದಾನದಲ್ಲಿ ಎಷ್ಟು ವೆಚ್ಚವಾಗಿದೆ ಮತ್ತು ಎಷ್ಟು ಉಳಿಕೆಯಾಗಿದೆ;

ಎ) ಬೀದರ್ ಜಿಲ್ಲೆಯ ಬೇರೆ ಯಾವುದಾದರೂ ಸ್ಥಳಗಳನ್ನು ಪ್ರವಾಸೋದ್ಯಮ ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಏ) ಹಾಗಿದ್ದಲ್ಲಿ, ಆ ಪ್ರದೇಶಗಳು ಯಾವುವು; (ವಿವರಗಳನ್ನು ನೀಡುವುದು);

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

Yes.

ಆ) ಬೀದರ್ ನಗರದಲ್ಲಿರುವ ಎಲ್ಲಾ ಪ್ರವಾಸಿ ಸ್ಥಳಗಳನ್ನು ಅಂದರೆ:

ನಾನಕ್ ಝುರಾ, ಪಾಪನಾಶ ಶಿವ ದೇವಾಲಯ, ನರಸಿಂಹ, ಜಾರಿಣಿ, ಮಹಮದ್ ಗವಾನ್ ಮದ್ರಸಾ, ಬೀದರ್‌ಕೋಟೆ, ಬರೀಡ್ ಶಾಹಿ ಗೋರಿಗಳು ಸ್ಥಳಗಳನ್ನು ಗುರಿತಿಸಲಾಗಿದೆ.

The following tourists spots in Bidar have been identifilled in Bidar:

Nanakjara, Papabasha Shiva Temple, Narasimha Jarini, Mahammod Gawan Madrase, Bidar Fort, Bareed Shahi Tombs.

ಇ) ಬೀದರ್ ಜಿಲ್ಲೆಯಲ್ಲಿ ಬೀದರ್, ಬಸವಕಲ್ಯಾಣ, ಕಾರಂಜಾ ಜಲಾಶಯ, ನಾರಾಯಣಪುರ, ಜಲಶಂಗಿ ಇವುಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

Bidar, Basavakalyana, Karanja Dam, Narayanapura, Jalasangi are the identified as tourist places.

ಈ) ಹೌದು.

Yes.

ಉ) ಬೀದರ್, ಬಸವಕಲ್ಯಾಣ ಪ್ರವಾಸಿ ತಾಣಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ಕಾರಂಜಾ ಜಲಾಶಯ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗಿದೆ.

Tourist infrastructure have been provided in Bidar and Basavakalyana. It is proposed to provide tourist infrastructure at Karanja Dam.

ಊ) 2009–10ನೇ ಸಾಲಿನಲ್ಲಿ ರೂ.3000.00 ಲಕ್ಷಗಳನ್ನು ನಿಗದಿಪಡಿಸಿಕೊಂಡಿದ್ದು ಇದನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

An amount of Rs.3000.00 lakhs has been earmarked for this purpose during 2009-10 and action is being taken to release the same to Deputy Commissioner.

ಋ) 2008–09ನೇ ಸಾಲಿನಲ್ಲಿ ನಿಗದಿ ಪಡಿಸಿದ್ದ ಅನುದಾನ ರೂ.3500.00 ಲಕ್ಷಗಳನ್ನು ಕಳೆದ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

2009–10ನೇ ಸಾಲಿನಲ್ಲಿ ರೂ. 3000.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

An amount of Rs. 3500.00 lakhs has been released to Deputy Commissioner, Bidar during 2008-09 and an amount of Rs. 3000.00 lakhs has been earmarked for this purpose during 2009-10.

ಎ) ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

There is no such proposal.

ಏ) ಉದ್ಭವಿಸುವುದಿಲ್ಲ.

Does not arise.

778 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದ, ಕೊಲ್ಲಾರ, ಚಿಮ್ಮಲಗಿ, ಬಳೂತಿ, ಹಣಮಾಪೂರ, ಸಿದ್ದನಾಥ, ಗಣಿ, ರೊಳ್ಳಿ, ರೊಳ್ಳಿ ಎಲ್.ಟಿ., ಮುಂತಾದ ಕಡೆಗಳಲ್ಲಿ ಮೀನುಗಾರರಿಗೆ ವಸತಿ ಮತ್ತು ಸ್ಥಳಗಳ ಸೌಕರ್ಯಗಳಿಲ್ಲದೆ ಕಷ್ಟವನ್ನು ಅನುಭಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ವಸತಿ ಮತ್ತು ಸ್ಥಳ ಕಲ್ಪಿಸಿಕೊಡುವ ವಿಚಾರ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಕೈಗೊಂಡ ಕ್ರಮವೇನು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಹೌದು.

ಆ) ಮೀನುಗಾರಿಕೆ ಇಲಾಖೆಯಿಂದ ನಿವೇಶನ ನೀಡುವ ಯೋಜನೆ ಇರುವುದಿಲ್ಲ. ಆದರೆ, ನಿರಾಶ್ರಿತ ಮೀನುಗಾರರು ನಿವೇಶನ ಹೊಂದಿದ್ದರೆ ಮಾತ್ರ